ಅಧ್ಯಕ್ಷರು.—ಸಮರ್ಪಕ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ.ಬಿ. ಶಾಣಪ್ಪ.—ಉಳಿದೇ ಇಸವಿಯೊಳಗಾದರೂ ಇದನ್ನು ಮುಗಿಸುತ್ತೀರಾ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸರ್ವ ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಕಛೇರಿಗಳಲ್ಲಿ ೫ ದಿನಗಳ ಕೆಲಸದ ಬಗ್ಗೆ

೪೦ (೧೬೦) ಶ್ರೀ ಆರ್. ವೆಂಕಟರಾಮಯ್ಯ ಮತ್ತು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯ, ಕೇಂದ್ರ ಮತ್ತು ಆಂಧ್ರ ಸರ್ಕಾರಗಳು ಮಾಡಿದ ಆಡಳಿತ ಸುಧಾರಣೆಯನ್ನನುಸರಿಸಿ ಕಛೇರಿಗಳಲ್ಲಿ ವಾರಕ್ಕೆ ೬ ದಿನ ಕೆಲಸವನ್ನು ೫ ದಿನಕ್ಕೆ ಇಳಿಸಲಾಗಿದೆಯಲ್ಲವೆ ?

ಆ) ಇದರಿಂದ ಸೋಮವಾರ ಮತ್ತು ಶುಕ್ರವಾರ ಕೂಡಾ ಕಛೇರಿಗಳಲ್ಲಿನ ಕೆಲಸ ಸರಿಯಾಗಿ ನಡೆಯದೆ ಆಡಳಿತ ವ್ಯವಸ್ಥೆಯಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಪ್ರಾರಂಭವಾಗಿ ಇದನ್ನು ಬದಲಾಯಿಸಬೇಕೆಂದು ಎಲ್ಲಾ ವರ್ಗದ ಜನರು ಕೋರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಆಂಧ್ರ ಪ್ರದೇಶದ ಸರ್ಕಾರ ಕೂಡಾ ಈ ನೀತಿಯನ್ನು ಪುನರ್ವಿಮರ್ಶಿಸಿ ಶನಿವಾರ ಸಹ ಸರ್ಕಾರಿ ಕೆಲಸ ಮಾಡುವ ದಿನವೆಂದು ಘೋಷಿಸಿದೆಯಲ್ಲವೆ ?

ಈ) ಹಾಗಿದ್ದಲ್ಲಿ, ರಾಜ್ಯ ಸರ್ಕಾರದವರು ಸಹ ಸಾಮಾನ್ಯ ಜನರ ಮತ್ತು ಸರ್ಕಾರಿ ಆಡಳಿತದ ಹಿತದೃಷ್ಟಿಯಿಂದ ವಾರಕ್ಕೆ ೬ ದಿನದ ಕೆಲಸವನ್ನು ಪುನಃ ಜಾರಿಗೆ ತರಲು ಉದ್ದೇಶಿಸುವರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಆಡಳಿತ ಸುಗಮವಾಗಿ ನಡೆಯಬೇಕೆಂಬ ಉದ್ದೇಶದಿಂದ ಈ ಸುಧಾರಣೆಯನ್ನು ಜಾರಿಗೆ ತಂದಿದ್ದರೂ ಕೆಲವು ಮಹನೀಯರು ಇದನ್ನು ಬದಲಾಯಿಸಬೇಕೆಂದು ಕೋರಿದ್ದಾರೆ.

ಇ) ಹೌದು.

ಈ) ಪರಿಶೀಲನೆಯಲ್ಲಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಸರ್ಕಾರದವರು ಇತ್ತೀಚೆಗೆ ೬ ದಿನಗಳ ಕೆಲಸವನ್ನು ೫ ದಿನಕ್ಕೆ ಇಳಿಸಿದ್ದಾರೆ. ನಮಗೆಲ್ಲಾ ತಿಳಿದಿರುವಂತೆ ಸರ್ಕಾರಿ ನೌಕರರು ಸೋಮವಾರ ೧೦-೩೦ಕ್ಕೆ ಬರುತ್ತಾರೆ, ಶುಕ್ರವಾರ ಮಧ್ಯಾಹ್ನ ಬಿಡುತ್ತಾರೆ. ಸರ್ಕಾರದ ಆಡಳಿತ ಸುಗಮವಾಗಿ ನಡೆಯಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಲಾಗಿದೆಯೆಂದು ತಿಳಿಸಿದ್ದೀರಿ ಆಡಳಿತ ಸುಗಮವಾಗಿ, ದಕ್ಷತೆಯಿಂದ ಹಾಗೂ ಚುರುಕಿನಿಂದ ನಡೆಯುತ್ತಿದೆಯೇ ? ಒಂದು ದಿವಸ ಸರ್ಕಾರದ ಕೆಲಸ ಕಾರ್ಯ ನಡೆಯುವುದಕ್ಕಾದರೆ ಸರ್ಕಾರದ ಬೊಕ್ಕಸಕ್ಕೆ ೨೭೦ ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ. ಸೋಮವಾರ ಮತ್ತು ಶುಕ್ರವಾರ ಅರ್ಧರ್ಧ ದಿವಸ ಸೇರಿದರೆ ೫೫೦ ಕೋಟಿ ನಷ್ಟವಾಗುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆಂಧ್ರ ಪ್ರದೇಶದವರು ೫ ದಿನಗಳ ಕೆಲಸ ಸರಿಹೊಂದಲಿಲ್ಲವೆಂದು ಮತ್ತೆ ೬ ದಿವಸಗಳ ಕೆಲಸ ಮಾಡುವಂತೆ ಮಾಡಿದ್ದಾರೆ. ಆ ರೀತಿ ಇಲ್ಲೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರಶ್ನೆ ಕೇಳುವ ಬದಲು ಅವರು ಸೂಚನೆ ಕೊಟ್ಟಿದ್ದಾರೆ, ನಾನು ಹೇಳುವುದು ಇಷ್ಟೆ. ಪಾರದಲ್ಲಿ ೫ ದಿವಸದ ಕೆಲಸವನ್ನು ನಾವಾಗಿಯೇ ಪ್ರಥಮತ ಮಾಡಲಿಲ್ಲ. ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರ ಅನೇಕ ರಾಜ್ಯ ಸರ್ಕಾರಗಳು ಹೊಸ ಈ ನಿರ್ಣಯ ತೆಗೆದುಕೊಂಡ ಮೇಲೆ ನಾವು ಕೂಡ ತೆಗೆದುಕೊಂಡೆವು. ಅಷ್ಟೇ ಅಲ್ಲ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಕೂಡ ೫ ದಿವಸದ ಕೆಲಸದ ಜಾರಿಯಲ್ಲಿದೆ. ಇದರ ಮೂಲ ಉದ್ದೇಶ ಏನೆಂದರೆ ೫ ದಿವಸ ಚೆನ್ನಾಗಿ ಕೆಲಸ ಮಾಡಬೇಕು ದಕ್ಷತೆಯಿಂದ ಕೆಲಸ ಮಾಡಬೇಕು, ಕಷ್ಟ ಪಟ್ಟು ಕೆಲಸ ಮಾಡಬೇಕು ಎಂದು ಉಳಿದ ಎರಡು ದಿವಸಗಳ ಕಾಲ ಓದುವುದು, ಬರೆಯುವುದು, ಮನರಂಜನೆಗಳಲ್ಲಿ ಭಾಗವಹಿಸುವುದು. ಸೋಮವಾರ ದಿವಸ ಪ್ರಫುಲ್ಲಿತವಾದ ಮನಸ್ಸಿನಿಂದ ಕಚೇರಿಗೆ ಬರಬೇಕು ಎನ್ನುವ ಉದ್ದೇಶದಿಂದ

ಇದನ್ನು ಮಾಡಲಾಗಿತ್ತು. ಅದು ಎಷ್ಟರ ಮಟ್ಟಿಗೆ ಈಡೇರಿಕೆಯೋ ಎನ್ನುವ ಬಗ್ಗೆ ಸಂಶೋಧನೆ ಮಾಡುತ್ತಿದ್ದೇವೆ. ಆಂದ್ರದವರು ಮಾಡಿದ್ದರು, ಇತ್ತೀಚೆಗೆ ಕೈಬಿಟ್ಟಿದ್ದಾರೆಂದು ಹೆಳಿದರು, ನಾನು ಈ ವಿಚಾರದಲ್ಲಿ ಅಷ್ಟು ಬೇಗ ತೀರ್ಮಾನ ಮಾಡಲಿಕ್ಕೆ ಬಯಸುವುದಿಲ್ಲ. ಆಂದರೆ, ಈ ವಿಚಾರವನ್ನು ಮುಂದುವರಿಸಿಕೊಂಡು ಹೋಗುವ ಹಠವೂ ಇಲ್ಲ, ಈ ಒಂದು ವ್ಯವಸ್ಥೆಯಿಂದ ಜನರಿಗೆ ಅನುಕೂಲವಾಗಿದೆಯೇ ಇಲ್ಲವೇ ಎನ್ನುವ ಬಗ್ಗೆ ರೀಸರ್ಚ್ ಮಾಡಿ ಸರ್ವೆ ಮಾಡಿ ವರದಿ ಕೊಡುವಂತೆ ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನವರಿಗೆ ಹೇಳಿದ್ದೇವೆ. ಅವರಿಂದ ವರದಿ ಬಂದಮೇಲೆ ಕೊನೆಯ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಮ್ಮ ನಾಯಕರು ಹೇಳಿದಹಾಗೆ ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನವರು ಅಥಣಿ ತಾಲ್ಲೂಕಿಗೆ ಬಂದು ಜನತೆಯನ್ನು ಕಂಡು ವರದಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಜನತೆಗೆ ತಾಲ್ಲೂಕು ಮಟ್ಟದಲ್ಲಿ ೫ ದಿವಸಗಳ ಕೆಲಸದಿಂದ ತೊಂದರೆಯಾಗಿರುವುದು ಕಂಡು ಬಂದಿದೆ. ರೀಸರ್ಚ್ ರಿಪೋರ್ಟ್ ಬಂದ ಕೂಡಲೇ ೬ ದಿವಸಗಳ ಕೆಲಸ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಲೀಲಾದೇವಿ ಪ್ರಸಾದ್‌ರವರು ತಮ್ಮ ಅಭಿಪ್ರಾಯವನ್ನು ಅವರಿಗೆ ಕೊಟ್ಟಿರಬೇಕೆಂದು ಅಂದುಕೊಂಡಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಸದನವನ್ನು ನಿಗಿಸುವಂಥ ಉತ್ತರ ಕೊಟ್ಟಿದ್ದಾರೆ. ಜನರಿಗೆ ಅನುಕೂಲವಾಗಿದೆಯೋ, ಅನಾನುಕೂಲವಾಗಿದೆಯೋ ಅದನ್ನು ತಿಳಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ, ಈ ಮನೆಯ ಎರಡು ಭಾಗದ ಸದಸ್ಯರಿಗೂ ಕೂಡ ತೊಂದರೆಯಾಗಿರುವುದು ಗೊತ್ತಿದೆ. ಸ್ವತಃ ಮುಖ್ಯ ಮಂತ್ರಿಯವರಿಗೂ ಗೊತ್ತಿದೆ. ಈ ವಿಚಾರದಲ್ಲಿ ಯಾವ ರೀಸರ್ಚ್ ಬೇಕಾಗಿಲ್ಲ. ನಮ್ಮ ದೇಶದಲ್ಲಿ ಅಮೇರಿಕಾ ಇನ್ನಿತರ ದೇಶಗಳಲ್ಲಿ ಕೊಡುವಂತೆ ನಾವು ಪಗಾರ ಕೊಡುತ್ತಿಲ್ಲ. ಒಂದು ದಿನ ಹೆಂಡತಿರು ಮಕ್ಕಳನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗುವುದು ಕಷ್ಟವಾಗಿರುವಾಗ ಎರಡು ದಿವಸ ರಜಾದಿಂದ ಏನು ಮಾಡಬೇಕಾಗುತ್ತದೆ, ಕಛೇರಿಗೆ ಬರೋಣವೆಂದರೆ ಕದಹಾಕಿರುತ್ತಾರೆ. ಇದರಿಂದ ನೌಕರ ವರ್ಗದವರಿಗೆ ತೊಂದರೆಯಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಲ್ಲಿಟ್ಟುಕೊಂಡು ಆದಷ್ಟು ಬೇಗ ೬ ದಿವಸಗಳ ಕೆಲಸವನ್ನು ಜಾರಿಗೆ ತರುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ. ಮೊನ್ನೆ ತಾನೆ ಮಾನ್ಯ ಪ್ರಧಾನ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಉತ್ತರ ಕೊಡುತ್ತಾ ಇದರಿಂದ ತನ್ನ ದೃಷ್ಟಿಯಲ್ಲಿ ಸರ್ಕಾರಿ ನೌಕರವರ್ಗದವರಿಗೆ ಹೆಚ್ಚಿನ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಅನುಕೂಲವಾಗಿದೆಯೆಂದು ಹೇಳಿದ್ದಾರೆ. ಮಾನ್ಯ ಕೆ.ಹೆಚ್. ಪಾಟೀಲರು ಇಲ್ಲಿ ಅದಕ್ಕೆ ವಿರುದ್ಧವಾಗಿ ಹೇಳಿರುವುದರಿಂದ ಅದನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಪ್ರಧಾನಿಯವರು ಹೇಳಿದ್ದೆಲ್ಲವನ್ನು ಕೇಳುತ್ತೀರಂದು ಹೇಳಿಬಿಟ್ಟರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಸರ್ಕಾರಿ ಕಚೇರಿಗಳ ಕೆಲಸದ ದಿನಗಳ ಸಂಖ್ಯೆ ೬ ದಿನಗಳಿರಬೇಕೋ ೫ ದಿನಗಳಿರಬೇಕೋ ಎಂಬುದು ಈಗಿನ ಪ್ರಶ್ನೆ. ಸುಮಾರಾಗಿ ಜನಾಭಿಪ್ರಾಯ ಶ್ರೀ ಕೆ. ಹೆಚ್. ಪಾಟೀಲರ ಪ್ರಕಾರ ೬ ದಿನಗಳಿರಬೇಕೆಂಬುದು. ನೌಕರರೂ ಜನಗಳೇ. ಇದರ ಜೊತೆಗೆ ತಮ್ಮ ಪಕ್ಷದ ಸಭೆಯಲ್ಲೂ ಈ ಬಗ್ಗೆ ಪ್ರಸ್ತಾಪವಾಯಿತು ಎಂದು ಪತ್ರಿಕೆಗಳನ್ನು ಓದಿದ ನೆನಪು, Subject to correction., ಹಾಗೆ ಪ್ರಸ್ತಾಪ ಮಾಡಿದಾಗ ಅಲ್ಲಿ ಏನಾಯಿತು ಎಂದು ಗೊತ್ತಾಗಲಿಲ್ಲ. ನಮ್ಮ ಪಕ್ಷದ ಪ್ರಧಾನಮಂತ್ರಿಗಳೇನೋ ಹಾಗೆ ಹೇಳಿದರು. ನಿಮ್ಮ ಪಕ್ಷದ ಸಭೆಯಲ್ಲಿ ಏನು ತೀರ್ಮಾನ ಆಯಿತು ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಪಕ್ಷದ ಸಭೆಯಲ್ಲಿ ೬ ದಿನಗಳ ಕೆಲಸದ ಪ್ರಮಾಣವನ್ನು ೫ ದಿನಗಳಿಗೆ ಇಳಿಸುವ ವಿಚಾರ ಪ್ರಸ್ತಾಪಕ್ಕೆ ಬಂದಿಲ್ಲ. ಹಾಗೆಂದು ಪತ್ರಿಕೆಗಳಲ್ಲಿ ಬಂದಿರುವುದು ತಪ್ಪು. ಈ ಬಗ್ಗೆ ಮತ್ತೆ ಹೆಚ್ಚು ಪ್ರಶ್ನೆಗಳ ಅಗತ್ಯವಿಲ್ಲ ಎಂದು ನನಗನ್ನಿಸುತ್ತದೆ. ಈಗ ಒಂದು ಸರ್ವೆ ಮಾಡುತ್ತಿದ್ದೇವೆ. ಅದರ ರಿಪೋರ್ಟ್ ಬಂದ ತಕ್ಷಣ ನಮ್ಮ ಪಕ್ಷದ ಸಭೆಯಲ್ಲೂ ಇದನ್ನು ಇಡುತ್ತೇವೆ. ಇಲ್ಲೂ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಬಿ. ಎಸ್. ಯೆಡಿಯೂರಪ್ಪ.—ಈ ಸದನಕ್ಕಿಂತ ದೊಡ್ಡ ಸಂಸ್ಥೆ, ಸರ್ವೆ, ಯಾವುದೂ ಇಲ್ಲ. ಹಿಂದೆ ತಾವು ಈ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಸದನಕ್ಕೆ ತಿಳಿಸುತ್ತೇವೆ ಎಂದು ಹೇಳಿದ್ದೀರಿ. ಈಗಲಾದರೂ ಹೇಳಿಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಪಕ್ಷದ ಪ್ರಸ್ತಾಪ ಮಾಡಿದ್ದು ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದರಿಂದ. ಇಲ್ಲದಿದ್ದರೆ ಮಾಡುತ್ತಿರಲಿಲ್ಲ. ಸರ್ವೆ ರಿಪೋರ್ಟ್ ಬಂದ ನಂತರ ಸರ್ಕಾರ ಇದನ್ನು ಪುನರವಲೋಕನ ಮಾಡುತ್ತದೆ ಅನಂತರ ಅದರ ಬಗ್ಗೆ ಅನೌನ್ಸ್‌ಮೆಂಟ್ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಯಾವಾಗ ಮಾಡುತ್ತೀರಿ ಹೇಳಿಬಿಡಿ ? ಎಷ್ಟು ದಿವಸದಲ್ಲಿ ರಿಪೋರ್ಟ್ ತರಿಸಿಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ರಿಪೋರ್ಟ್ ಬಂದ ತಕ್ಷಣ ಆ ವಿಚಾರ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಲಿಖಿತ ಮೂಲಕ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿ

ಹಸಿರು ಕಾರ್ಡು ಹಂಚುವ ಬಗ್ಗೆ

೨೧ (೭) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕಾನೂನು, ಸಂಸದೀಯ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

(ಅ) ರಾಜ್ಯದ ಎಲ್ಲಾ ತಾಲೂಕುಗಳಲ್ಲೂ ಹಸಿರು ಕಾರ್ಡುಗಳನ್ನು ಪಡೆಯಲು ಅರ್ಹತೆ ಪಡೆದಂತಹ ಗ್ರಾಮಾಂತರ ಪ್ರದೇಶಗಳ ಜನಸಂಖ್ಯೆಯಲ್ಲಿ ಶೇಕಡಾವಾರು ಎಷ್ಟು ಸಂಸಾರಗಳಿವೆ ?

(ಆ) ಹಸಿರು ಕಾರ್ಡುಗಳನ್ನು ಹಂಚಿರುವ ಸಂಸಾರಗಳೆಷ್ಟು ಹಾಗೂ ಹಸಿರು ಕಾರ್ಡುಗಳನ್ನು ಹಂಚದೇ ಇರುವ ಸಂಸಾರಗಳು ಎಷ್ಟು ?

(ಇ) ವಿನಾ ಕಾರಣ ಹಂಚಲಾಗಿರುವ ಸಂಸಾರಗಳ ಪೈಕಿ ಶೇಕಡ ೧೦ ಪರ್ಸೆಂಟ್ ಕಾರ್ಡುಗಳನ್ನು ವಾಪಸ್ ಪಡೆಯಲು ಸರ್ಕಾರದವರು ಯತ್ನಿಸಿದ್ದಾರೆಯೇ ?

(ಈ) ಈ ಬಗ್ಗೆ ಹೊಸದಾಗಿ ಸಮೀಕ್ಷೆ ನಡೆಸಿ ಅರ್ಹತೆ ಪಡೆದಿದ್ದರೂ ಹಸಿರು ಕಾರ್ಡು ಕೊಡದೆ ಇರುವ ಸಂಸಾರಗಳಿಗೆ ಸರ್ಕಾರದವರು ಈಗ ಅದನ್ನು ಹಂಚಿದ್ದಾರೆಯೇ ?

(ಉ) ಕೋಲಾರ ಜಿಲ್ಲೆಯಲ್ಲಿ ಎಷ್ಟು ಹಸಿರು ಕಾರ್ಡುಗಳನ್ನು ಹಂಚಿದ್ದಾರೆ ? ಮುಳಬಾಗಿಲು ತಾಲ್ಲೂಕಿನಲ್ಲಿ ಎಲ್ಲಾ ಹಸಿರು ಕಾರ್ಡುದಾರರಿಗೆ ಬಟ್ಟೆ ಮತ್ತು ಧಾನ್ಯಗಳನ್ನು ಕೊಡಲಾಗಿದೆಯೆ ? ಹಾಗಿಲ್ಲದಿದ್ದಲ್ಲಿ ತಕ್ಷಣ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು).—

(ಅ) ಶೇಕಡ ೫೨.

(ಆ) ರಾಜ್ಯದಲ್ಲಿ ೩೦,೦೮,೯೨೫ ಹಸಿರು ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ. ಇದ ಜೊತೆಗೆ ೨೬,೪೮,೮೦೨ ಸಂಸಾರಗಳಿಗೆ ಕೇಸರಿ ಕಾರ್ಡುಗಳನ್ನು ಹಂಚಲಾಗಿದೆ.

(ಇ) ಯತ್ನಿಸಲಿಲ್ಲ.